ಮೂಲ ದಾವಾ ನಂಃ 74/12 ಪಿ ಡಬ್ಲುಃ 1

ಸಾಕ್ಷಿಯನ್ನು ದಿನಾಂಕಃ 19-11-2019 ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

ಮುಂದುವರೆದ ಪಾಟೀಸವಾಲುಃ ಶ್ರೀ ಎಂ ಎಂ ಜೆ ವಕೀಲರಿಂದ

ಮೂಲದಾವಾ ನಂ 47/96 ರಲ್ಲಿ ನಾನು ನನ್ನ ಜವಾಬಿನಲ್ಲಿ ವಾಂಟಣಿ ಹಿಸ್ಸಾ ದಸ್ತಾವೇಜಿನ ಪ್ರಕಾರ "ನಾರಾಯಣ ಗಣಪ ಹೆಗಡೆ ಅಂದರೆ ನನ್ನ ಅಜ್ಜ , ಮಹಾಬಲೇಶ್ವರ ಸುಬ್ರಾಯ ಹೆಬ್ಬಾರ, ರಾಮಕೃಷ್ಣ ನರಸಿಂಹ ಭಟ್ಟ ಇವರುಗಳ ನಡುವೆ ದಿಃ 25.08.1945 ನೇ ಇಸ್ವಿಯಲ್ಲಿ ಆದ ನೊಂದಾಯಿತ ಪಾಲು ಪಟ್ಟಿ ಪ್ರಕಾರ ನನ್ನ ಅಜ್ಜ ನಾರಾಯಣನಿಗೆ 5 ಎಕರೆ 9 ಗುಂಟೆ ಪೋಟ್ ಖರಾಬು ಸಹಿತ ಮತ್ತು 16 ಗುಂಟೆ 8 ಆಣೆ ನನ್ನ ಅಜ್ಜನ ಪಾಲಿಗೆ ಬಂದಿತ್ತು" ಎಂದು ಹೇಳಿದ್ದೇನೆ ಎಂದರೆ ನನಗೆ ಈಗ ನೆನಪಿಲ್ಲ. ಸಾಕ್ಷಿಗೆ ಸದರಿ ಜವಾಬಿನ ದೃಢೀಕೃತ ನಕಲನ್ನು ತೋರಿಸಿ ಕೇಳಲಾಗಿ ಸಾಕ್ಷಿ ಸದರಿ ವಿಚಾರ ನನಗೆ ಈಗ ನೆನಪಿಲ್ಲ ಎಂದು ಬೇಜವಾಬ್ದಾರಿತನದಿಂದ ಉತ್ತರ ನೀಡಿರುತ್ತಾರೆ. ಸದರಿ ಹೇಳಿಕೆಯ ಭಾಗವನ್ನು ನಿಡಿ 1 ಎಂದು ನಿಶಾನೆಗೊಳಿಸಲಾಯಿತು.

ಅದೇ ಮೂಲದಾವಾ ನಲ್ಲಿ ಅದೇ ಜವಾಬಿನಲ್ಲಿ ಮುಂದುವರೆದು "ಮೇಲೆ ಹೇಳಿದ 4 ಹಿಸ್ಸೇದಾರರು ಸರ್ವೆ ನಂ 401 ಮತ್ತು ಇತರೆ ಸ್ಥಳಗಳನ್ನು ಜಂಟಿಯಾಗಿ ಒಂದೇ ದಸ್ತಾವೇಜಿನ ಮೂಲಕ ಕ್ರಯಕ್ಕೆ ಪಡೆದುಕೊಂಡಿದ್ದರು ಎನ್ನುವುದು ಸರಿ" ಎಂದು ಹೇಳಿದ್ದೇನೆ ಎಂದರೆ ಸಾಕ್ಷಿ ಪುನಃ ನನಗೆ ನೆನಪಿಲ್ಲ ಎಂದು ಉತ್ತರಿಸುತ್ತಾರೆ. ಸಾಕ್ಷಿಗೆ ಸದರಿ ಜವಾಬಿನ ದೃಢೀಕೃತ ನಕಲನ್ನು ತೋರಿಸಿ ಕೇಳಲಾಗಿಯೂ ಕೂಡ ಸಾಕ್ಷಿ ಸದರಿ ವಿಚಾರ ನನಗೆ ಈಗ ನೆನಪಿಲ್ಲ ಎಂದು ಪುನಃ ನುಡಿದಿದ್ದರಿಂದ ಆ ಭಾಗವನ್ನು ನಿಡಿ 2 ಎಂದು ಗುರುತಿಸಲಾಯಿತು.

ಅದೇ ದಾವೆಯ ಅದೇ ಜವಾಬಿನಲ್ಲಿ ಮುಂದುವರೆದು "ಸದರಿ ದಸ್ತಾವೇಜಿನ ಹೊರತಾಗಿ ಈ ಆಸ್ತಿ ಕುರಿತು ಬೇರೆ ಯಾವುದೇ ಕಡೆಯಿಂದ ನನ್ನ ಅಜ್ಜ ಆಸ್ತಿಯನ್ನು ಕ್ರಯಕ್ಕೆ ಪಡೆದುಕೊಂಡಿರಲಿಲ್ಲ " ಎಂದು ಹೇಳಿದ್ದೇನೆ ಎಂದರೆ ಸಾಕ್ಷಿ ಪುನಃ ನನಗೆ ನೆನಪಿಲ್ಲ ಎಂದು ಉತ್ತರಿಸುತ್ತಾರೆ. ಸಾಕ್ಷಿಗೆ ಸದರಿ ಜವಾಬಿನ ದೃಢೀಕೃತ ನಕಲನ್ನು ತೋರಿಸಿ ಕೇಳಲಾಗಿಯೂ ಕೂಡ ಸಾಕ್ಷಿ ಸದರಿ ವಿಚಾರ ನನಗೆ ಈಗ ನೆನಪಿಲ್ಲ ಎಂದು ಪುನಃ ನುಡಿದಿದ್ದರಿಂದ ಆ ಭಾಗವನ್ನು ನಿಡಿ 3 ಎಂದು ಗುರುತಿಸಲಾಯಿತು.

ಅದೇ ದಾವೆಯ ಅದೇ ಜವಾಬಿನಲ್ಲಿ ಮುಂದುವರೆದು "ಖೈರದ ಬೆಟ್ಟ ಎಲ್ಲಿದೆ ಮತ್ತು ಕರಡದ ಬ್ಯಾಣ ಎಲ್ಲಿದೆ ಎಂದು ನನಗೆ ಗೊತ್ತಿಲ್ಲ " ಎಂದು ಹೇಳಿದ್ದೇನೆ ಎಂದರೆ ಸಾಕ್ಷಿ ಪುನಃ ನನಗೆ ನೆನಪಿಲ್ಲ ಎಂದು ಉತ್ತರಿಸುತ್ತಾರೆ. ಸಾಕ್ಷಿಗೆ ಸದರಿ ಜವಾಬಿನ ದೃಢೀಕೃತ ನಕಲನ್ನು ತೋರಿಸಿ ಕೇಳಲಾಗಿಯೂ ಕೂಡ ಸಾಕ್ಷಿ ಸದರಿ ವಿಚಾರ ನನಗೆ ಈಗ ನೆನಪಿಲ್ಲ ಎಂದು ಪುನಃ ನುಡಿದಿದ್ದರಿಂದ ಆ ಭಾಗವನ್ನು ನಿಡಿ 4 ಎಂದು ಗುರುತಿಸಲಾಯಿತು.

ನನ್ನ ತಂದೆ , ನನ್ನ ಅಜ್ಜ ಹಾಗೂ ನನ್ನ ಚಿಕ್ಕಪ್ಪನ ನಡುವೆ 1972 ನೇ ಇಸ್ವಿಯಲ್ಲಿ ನೋಂದಾಯಿತ ಹಿಸ್ಸಾ ಪಾಲುಪಟ್ಟಿ ಆಗಿತ್ತು ಅಲ್ಲವೇ ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎನ್ನುತ್ತಾರೆ . ಈಗ ಸಾಕ್ಷಿಗೆ ಮೇಲೆ ಹೇಳಿದ ಮೂಲದಾವಾ ನಂ 47/96 ರಲ್ಲಿ ಸಲ್ಲಿಸಿದ ಜವಾಬಿನ ದೃಢೀಕೃತ ನಕಲನ್ನು ಪುನಃ ತೋರಿಸಿ ನೀವು " ನನ್ನ ತಂದೆ , ನನ್ನ ಅಜ್ಜ ಹಾಗೂ ನನ್ನ ಚಿಕ್ಕಪ್ಪನ ನಡುವೆ ಆದ ಪಾಲು ಪಟ್ಟಿ ನನ್ನ ಸ್ವಾಧೀನತೆಯಲ್ಲಿದೆ , ಅದನ್ನು ಓದಿ ನಾನು ಅನುಭವ ಮಾಡಿಕೊಂಡಿದ್ದೇನೆ, ಅದರಲ್ಲಿ ಬರೆದ ವಿಚಾರಗಳು ಸರಿಯಿದೆ " ಎಂದು ಹೇಳಿದ್ದೇನೆ ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎನ್ನುತ್ತಾರೆ . ಸಾಕ್ಷಿಗೆ ಸದರಿ ಜವಾಬಿನ ದೃಢೀಕೃತ ನಕಲನ್ನು ತೋರಿಸಿ ಕೇಳಲಾಗಿಯೂ ಕೂಡ ಸಾಕ್ಷಿ ಸದರಿ ವಿಚಾರ ನನಗೆ ಈಗ ನೆನಪಿಲ್ಲ ಎಂದು ಪುನಃ ನುಡಿದಿದ್ದರಿಂದ ಆ ಭಾಗವನ್ನು ನಿಡಿ 5 ಎಂದು ಗುರುತಿಸಲಾಯಿತು.

ನನಗೆ ಮೂಲದಾವಾ ನಂ 47/96 ರಲ್ಲಿ ಸಲ್ಲಿಸಿದ ಜವಾಬಿನಲ್ಲಿ ಏನನ್ನು ಹೇಳಿದ್ದೆ ಎಂಬುದು ನನಗೆ ಈಗ ನೆನಪಿಲ್ಲ. ದಿಃ 12.07.1974 ರಲ್ಲಿ ಆದ ಕ್ರಯ ದಸ್ತಾವೇಜಿನಲ್ಲಿ ನನ್ನ ತಂದೆ ಗಣಪತಿ ನಾರಾಯಣ ಹೆಗಡೆ, ನನ್ನ ಚಿಕ್ಕಪ್ಪ ರಾಮಕೃಷ್ಣ ನಾರಾಯಣ ಹೆಗಡೆ ಮತ್ತು ನನ್ನ ಅಜ್ಜ ನಾರಾಯಣ ಗಣಪ ಹೆಗಡೆ ಕೂಡಿ 4 ನೇ ಪ್ರತಿವಾದಿ ಗೋಪಾಲಕೃಷ್ಣ ರಾಮ ಭಟ್ಟ ಇವರಿಗೆ ಸರ್ವೆ ನಂ 401 ರ ಪೈಕಿ 16 ಗುಂಟೆ 8 ಆಣೆ ಕರಡದ ಬ್ಯಾಣ ಜಾಗವನ್ನು ಸೇರಿ ಇನ್ನಿತರ ಆಸ್ತಿಗಳನ್ನು ಖಂಡಿತ ಕ್ರಯ ದಸ್ತು ಮೂಲಕ ಕೊಟ್ಟಿದ್ದರು ಎಂದರೆ ಸರಿಯಲ್ಲ. ನಾನು ಎಲ್ ಎಲ್ ಬಿ ಪದವೀಧರನಾದರೂ , ಕಾನೂನಿನ ಬಗ್ಗೆ ತಿಳುವಳಿಕೆ ಇದ್ದರೂ ಸುಳ್ಳು ಹೇಳಿದರೆ ಶಿಕ್ಷೆ ಆಗುತ್ತದೆ ಎಂಬ ವಿಷಯ ಗೊತ್ತಿದ್ದರೂ ಬುದ್ಧ್ಯಾಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

ಸಹಿ/-

ಹೆಚ್ಚುವರಿ ಸಿವಿಲ್ ಜಡ್ಜ,ಹೊನ್ನಾವರ.